20. ಪೋಷಕ ಸಮಿತಿ ರಚನೆಯಾದ ನಂತರ ಶಿಕ್ಷಣದ ಗುಣಮಟ್ಟವು ಸುಧಾರಣೆಯಾಗಿರುವುದು ಹಾಗೂ ಶಾಲೆಯು ಸಂಬಂಧಿಸಿದ ಅನುದಾನದ ಖರ್ಚಿನ ಬಗ್ಗೆ ಪಾರದರ್ಶಕತೆಯು ಕಂಡುಬಂದಿರುವುದು ಮುಖ್ಯ ಅಂಶವಾಗಿದೆ.

21. ಪೋಷಕ ಸಮಿತಿಯಿಂದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟದಲ್ಲಿ ಸುಧಾರಣೆಯಾಗಿರುವ ಬಗ್ಗೆ ಔಪಚಾರಿಕವಾಗಿ ಯಾವುದೇ ಮೌಲ್ಯಮಾಪನವನ್ನು ಮಾಡಿರುವುದಿಲ್ಲ.

ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಯೋಗ ಮತ್ತು ನೈತಿಕ ಶಿಕ್ಷಣವನ್ನು ಕಡ್ಡಾಯ ಗೊಳಿಸುವುದು

322 (539) ಶ್ರೀ ಸಭಾಪತಿ ಯು.ಆರ್. (ಉಡುಪಿ) - ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಯೋಗ ಮತ್ತು ನೈತಿಕ ಶಿಕ್ಷಣವನ್ನು 2003-2004 ರಿಂದ ಕಡ್ಡಾಯ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ ;

ಆ) ಇಲ್ಲವಾದಲ್ಲಿ, ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಪೋಷಕರ ಸಮಿತಿ ನೆರವಿನಿಂದ ಯೋಗ ಮತ್ತು ನೈತಿಕ ಶಿಕ್ಷಣವನ್ನು ಪ್ರಾರಂಭಿಸಲು ಸರ್ಕಾರ ಅನುಮತಿ ನೀಡುವುದೇ?

ಪ್ರೊ।। ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳ ಪಠ್ಯ ವಸ್ತುವಿನಲ್ಲಿ ದೈಹಿಕ ಆರೋಗ್ಯ ಹಾಗೂ ಯೋಗ ಶಿಕ್ಷಣ ಒಟ್ಟಿಗೆ ಸೇರಿಸಿ ವೇಳಾಪಟ್ಟಿಯಲ್ಲಿ ಈಗಾಗಲೇ ಅಳವಡಿಸಿದೆ. ನೈತಿಕ ಶಿಕ್ಷಣವನ್ನು ಸಹ 1 ರಿಂದ 10ನೇ ತರಗತಿಯ ಎಲ್ಲಾ ಪಠ್ಯ ಪುಸ್ತಕಗಳಲ್ಲಿ ಅಳವಡಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಗ್ರಾಮ ಪಂಚಾಯ್ತಿ ಆಡಳಿತ ವ್ಯವಸ್ಥೆಯ ಗಣಕೀಕರಣ

323 (540) ಶ್ರೀ ಸಭಾಪತಿ ಯು.ಆರ್. (ಉಡುಪಿ) - ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಗ್ರಾಮ ಪಂಚಾಯ್ತಿಯ ಆಡಳಿತ ವ್ಯವಸ್ಥೆಯನ್ನು ಗಣಕೀಕರಣಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

ಆ) ಸರ್ಕಾರ 'ಇ' ಆಡಳಿತ ಜಾರಿಗೆ ತರುವುದೆಂದು ಘೋಷಿಸಿ 3 ವರ್ಷಗಳಾದರೂ ಪಂಚಾಯತ್‌ರಾಜ್ ವ್ಯವಸ್ಥೆಯನ್ನು ಗಣಕೀಕರಣ ಮಾಡುವಲ್ಲಿ ಆಗುತ್ತಿರುವ ವಿಳಂಬಕ್ಕೆ ಕಾರಣಗಳೇನು ?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಗ್ರಾಮ ಪಂಚಾಯ್ತಿಗಳನ್ನು ಗಣಕೀಕರಣಗೊಳಿಸುವ ದಿಶೆಯಲ್ಲಿ ಈಗಾಗಲೇ ಟ್ಯಾಪ್ (TAP) ಸಭೆಯನ್ನು ಕರೆದು ಗ್ರಾಮ ಪಂಚಾಯ್ತಿಗಳು ಅಳವಡಿಸಿಕೊಳ್ಳಬೇಕಾದ ಮಾಹಿತಿಗಳ ಬಗ್ಗೆ ಅಂತಿಮ ನಿರ್ಧಾರವನ್ನು ಕೈಗೊಳ್ಳಲಾಗಿದೆ.

ಆ) ಈ ದಿಶೆಯಲ್ಲಿ ಗ್ರಾಮ ಪಂಚಾಯಿತಿಗಳನ್ನು ಗುರುತಿಸಲಾಗಿದ್ದು, ಅಬ್ದುಲ್ ನಜೀರ್‌ಸಾಬ್ ಸಂಸ್ಥೆಯಿಂದ ತರಬೇತಿಯನ್ನು ನೀಡಲು ವ್ಯವಸ್ಥೆ ಮಾಡಲಾಗಿದೆ. ಈಗಾಗಲೇ

44 ತಾಲ್ಲೂಕುಗಳನ್ನೊಳಗೊಂಡ 1310 ಗ್ರಾಮ ಪಂಚಾಯ್ತಿಗಳಿಗೆ ತರಬೇತಿ ಕಾರ್ಯಕ್ರಮ ಮುಗಿದಿದ್ದು ರಾಜ್ಯದ ಇನ್ನುಳಿದ ಎಲ್ಲಾ ಗ್ರಾಮ ಪಂಚಾಯ್ತಿಗಳ ಗಣಕೀಕರಣ ಕಾರ್ಯಕ್ರಮವು ಇನ್ನೆರಡು ವರ್ಷಗಳಲ್ಲಿ ಸಂಪೂರ್ಣಗೊಳ್ಳಲಿವೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರು ಮತ್ತು ಶುಶ್ರೂಶಕಿಯರ ನೇಮಕಾತಿ

324 (541) ಶ್ರೀ ಸಭಾಪತಿ ಯು.ಆರ್. (ಉಡುಪಿ) - ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರಿ ಆಸ್ಪತ್ರೆಗಳಲ್ಲಿ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಖಾಲಿಯಿರುವ ವೈದ್ಯರುಗಳ, ಶುಶ್ರೂಷಕಿಯರ, ಪ್ರಯೋಗಾಲಯ ತಜ್ಞರುಗಳ ಹುದ್ದೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು) ;

ಆ) 01-01-2002 ರಿಂದ 31-01-2003 ರವರೆಗೆ ಖಾಲಿಯಿದ್ದ ವೈದ್ಯರ ಹುದ್ದೆಗಳನ್ನು ಭರ್ತಿಗೊಳಿಸಿದ ಜಿಲ್ಲಾವಾರು ವಿವರ ನೀಡಿರಿ ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಒಟ್ಟು 1958 ಹುದ್ದೆಗಳು ಜಿಲ್ಲಾವಾರು ಮಾಹಿತಿಯನ್ನು ಕ್ರಮವಾಗಿ ಅನುಬಂಧ-1 ರಿಂದ 3 ರ ವರೆಗೆ ಲಗತ್ತಿಸಿದೆ.

ಆ) ಅನುಬಂಧ-4 ರಲ್ಲಿ ಒದಗಿಸಿದೆ.

ಅನುಬಂಧ-1

ರಾಜ್ಯ ಸರ್ಕಾರಿ ಆಸ್ಪತ್ರೆ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹುದ್ದೆಗಳು ಖಾಲಿಯಿರುವ ಜಿಲ್ಲಾವಾರು ಮಾಹಿತಿ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಖಾಲಿಯಿರುವ ಹುದ್ದೆಗಳ ಸಂಖ್ಯೆ
1	2	3
1	ಬೆಂಗಳೂರು (ಗ್ರಾಮಾಂತರ)	16
2	ಬೆಂಗಳೂರು (ನಗರ)	10
3	ಚಿತ್ರದುರ್ಗ	5
4	ದಾವಣಗೆರೆ	12
5	ಕೋಲಾರ	34
6	ಶಿವಮೊಗ್ಗ	37
7	ತುಮಕೂರು	6
8	ಮೈಸೂರು	11
9	ಮಂಡ್ಯ	12
10	ಚಾಮರಾಜನಗರ	11
11	ಹಾಸನ	11
12	ಚಿಕ್ಕಮಗಳೂರು	19